# ಶ್ರೀ ಸುತ್ತೂರು ಮಠ

## ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 257

**1 ಆಗಸ್ಟ್ 2023 * ಮಂಗಳವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

ಗಾಯನ



ವಿದ್ವಾನ್ ಅಭಿಷೇಕ್ ರಘುರಾಂ



ವಿದ್ವಾನ್ ಆಲಂಕೋಡು ವಿ.ಎಸ್.ಗೋಕುಲ್
ವಯೊಲಿನ್



ವಿದ್ವಾನ್ ಡಾ. ಯೆಲ್ಲಾ ವೆಂಕಟೇಶ್ವರರಾವ್
ಮೃದಂಗ



ವಿದ್ವಾನ್ ಜಿ.ಎಸ್. ರಾಮಾನುಜಂ
ಘಟಂ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದ್ವಾನ್ ಅಭಿಷೇಕ್ ರಘುರಾಂರವರು** ಪ್ರತಿಭಾನ್ವಿತ ಕರ್ನಾಟಕ ಸಂಗೀತಗಾರರು. ಮೃದಂಗ ದಿಗ್ಗಜ ವಿದ್ವಾನ್ ಪಾಲ್ಘಾಟ್ ಆರ್. ರಘುರವರ ಮೊಮ್ಮಕ್ಕಳು. ತಾಯಿ ಶ್ರೀಮತಿ ಉಷಾ ವಿದ್ವಾನ್ ಲಾಲ್ಗುಡಿ ಜಯರಾಮನ್‌ರವರ ಸೋದರಸೊಸೆ. ವಿದುಷಿ ಜಯಂತಿ ಕುಮರೇಶ್, ವಿದ್ವಾನ್ ಆರ್. ಅನಂತಕೃಷ್ಣನ್ ಮತ್ತು ಹಿನ್ನೆಲೆ ಗಾಯಕ ಶ್ರೀ ಹರಿಹರನ್ ಇವರೆಲ್ಲರೂ ಬಂಧುಗಳು. ಆರಂಭದಲ್ಲಿ ಇವರು ತಾತ ಪಾಲ್ಘಾಟ್ ರಘುರವರ ಬಳಿ ಮೃದಂಗ ವಾದನವನ್ನು ಕಲಿಯತೊಡಗಿದರು. ಅನಂತರ, ತಾಯಿಯವರಿಂದ ಪ್ರಾರಂಭಿಕ ಸಂಗೀತ ಶಿಕ್ಷಣ; ಬಳಿಕ ವಿದ್ವಾನ್ ಪಿ. ಎಸ್. ನಾರಾಯಣಸ್ವಾಮಿಯವರ ಬಳಿ ಮುಂದುವರಿಕೆ. ಅಣ್ಣಾ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಎಂಎಸ್ ಪದವಿ ಪಡೆದಿದ್ದಾರೆ.

ಶ್ರೀ ಅಭಿಷೇಕ್ ರಘುರಾಂರವರು ಬೆಂಗಳೂರಿನ ದೃಷ್ಟಿ ಐ ಕೇರ್ ಸಂಸ್ಥೆಗಾಗಿ ಭೂಮಿಕಾ ಟ್ರಸ್ಟ್‌ನವರು ಆಯೋಜಿಸಿದ "ಮಕ್ಕಳಿಂದ ಕರ್ನಾಟಕ ಸಂಗೀತ ಗೋಷ್ಠಿ"ಯನ್ನು ನಿರ್ದೇಶಿಸಿರುವರು. ಖ್ಯಾತ ತಬಲಾ ಮಾಂತ್ರಿಕ ಶ್ರೀ ಝಕೀರ್ ಹುಸೇನ್‌ರವರು "ಬರ್ಸಿ" ಕಾರ್ಯಕ್ರಮದಲ್ಲಿ ಇದನ್ನು ಪ್ರಸ್ತುತಿ ಪಡಿಸಿದರು. ಶ್ರೀ ಸುಬ್ರಹ್ಮಣ್ಯ ಭಾರತಿಯವರ ಗೀತೆಗಳನ್ನೊಳಗೊಂಡ "ಕಾದಲನ್ ಭಾರತಿ" ಆಲ್ಬಂ ನಿರ್ಮಾಣದಲ್ಲಿ ಪಾಲ್ಗೊಂಡಿರುವರು.

ಆಕಾಶವಾಣಿಯ "ಎ" ಶ್ರೇಣಿ ಕಲಾವಿದರು. ಮದರಾಸ್ ಮ್ಯೂಸಿಕ್ ಅಕ್ಯಾಡೆಮಿ, ನಾರದ ಗಾನಸಭಾ ಮುಂತಾದ ಪ್ರತಿಷ್ಠಿತ ಸಂಗೀತಸಂಸ್ಥೆಗಳ ಪುರಸ್ಕಾರಗಳಿಗೆ ಭಾಜನರು. ಎಸ್. ಬಾಲಚಂದರ್ ಟ್ರಸ್ಟ್‌ನ ಆಶ್ರಯದಲ್ಲಿ ನಡೆದ ಪಲ್ಲವಿ ಹಾಡುಗಾರಿಕೆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ವಿಜೇತರು. ಮದರಾಸ್ ಮ್ಯೂಸಿಕ್ ಅಕ್ಯಾಡೆಮಿಯ "ಬೆಸ್ಟ್ ಕನ್ಸರ್ಟ್" ಪ್ರಶಸ್ತಿ, "ಭರವಸೆಯ ಉದಯೋನ್ಮುಖ ಕಲಾವಿದ" ಪ್ರಶಸ್ತಿ, ಶ್ರೀಕೃಷ್ಣ ಗಾನಸಭೆಯ "ಯಜ್ಞರಾಮನ್ ಯೂತ್ ಎಕ್ಸೆಲೆನ್ಸ್" ಪ್ರಶಸ್ತಿ, "ಸಂಗೀತ ಚೂಡಾಮಣಿ ಪ್ರಶಸ್ತಿ", "ಷಣ್ಮುಖ ಸಂಗೀತ ಶಿರೋಮಣಿ" ಪುರಸ್ಕಾರ, ಸಂಗೀತ ನಾಟಕ ಅಕ್ಯಾಡೆಮಿಯ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ್", ಅತ್ಯುತ್ತಮ ಹಾಡುಗಾರಿಕೆಗಾಗಿ ಮದರಾಸ್ ಮ್ಯೂಸಿಕ್ ಅಕ್ಯಾಡೆಮಿಯ "ಯೋಗಂ ನಾಗಸ್ವಾಮಿ ಅವಾರ್ಡ್", ಮತ್ತು ಕಂಚಿ ಕಾಮಕೋಟಿ ಪೀಠದ "ಆಸ್ಥಾನ ವಿದ್ವಾನ್ ಪ್ರಶಸ್ತಿ" ಇವರಿಗೆ ಲಭಿಸಿರುವ ಕೆಲವು ಪ್ರಮುಖ ಪುರಸ್ಕಾರಗಳು.

**ವಿದ್ವಾನ್ ಆಲಂಕೋಡು ವಿ.ಎಸ್. ಗೋಕುಲ್‌ರವರು** ಅವರ ದೊಡ್ಡಪ್ಪ ಶ್ರೀ ಸುರೇಂದ್ರನ್ ಅಲಂಕೋಡ್ ಮತ್ತು ಪದ್ಮಶ್ರೀ ಶ್ರೀಮತಿ ಎ. ಕನ್ಯಾಕುಮಾರಿ ಇವರುಗಳ ಶಿಷ್ಯರು. ಮುಂಬಯಿಯ ಷಣ್ಮುಖಾನಂದ ಸಂಗೀತ ಸಭೆಯ "ಅತ್ಯುತ್ತಮ ಉದಯೋನ್ಮುಖ ಪಿಟೀಲು ವಾದಕ" ಪುರಸ್ಕೃತರು. ಅಖಿಲ ಭಾರತ ಆಕಾಶವಾಣಿಯ ಪೂರ್ವ ವಲಯ ಸ್ಪರ್ಧೆಯಲ್ಲಿ ವಯೊಲಿನ್‌ನಲ್ಲಿ ಪ್ರಥಮ ಬಹುಮಾನ ಮತ್ತು ಕೇರಳ ಶಾಲಾ ಯುವಜನೋತ್ಸವದಲ್ಲಿ ಸತತ ಐದು ಬಾರಿ ಪ್ರಶಸ್ತಿಗಳಿಸಿದ ಅಪೂರ್ವ ಸಾಧನೆ. ಆಕಾಶವಾಣಿಯ "ಬಿ" ಶ್ರೇಣಿ ಕಲಾವಿದರು. ಐದನೆಯ ವರ್ಷಕ್ಕೆ ವಯೊಲಿನ್ ಕಲಿಯಲು ಪ್ರಾರಂಭಿಸಿ, ಹತ್ತನೆಯ ವರ್ಷಕ್ಕೇ ಸ್ವತಂತ್ರ ವಾದನ ಮತ್ತು ಸಾಥೀದಾರರಾದ ವೈಶಿಷ್ಟ್ಯ. ಸುಮಾರು 600 ಕ್ಕೂ ಹೆಚ್ಚು ಕಚೇರಿಗಳಲ್ಲಿ ಭಾಗವಹಿಸಿರುವ ಹೆಗ್ಗಳಿಕೆ.

ಪದ್ಮಶ್ರೀ ಪುರಸ್ಕೃತರಾದ **ಡಾ. ಯೆಲ್ಲಾ ವೆಂಕಟೇಶ್ವರ ರಾವ್‌ರವರು** ಅಸಾಧಾರಣ ಪ್ರತಿಭಾವಂತರು. ಮೂರು ದಶಕಗಳಿಗೂ ಹೆಚ್ಚು ಕಾಲ ಆಕಾಶವಾಣಿಯಲ್ಲಿ "ಎ" ಶ್ರೇಣಿ ಕಲಾವಿದರು ಮತ್ತು ಸಂಗೀತ ನಿರ್ದೇಶಕರು. ತೆಲುಗು ವಿಶ್ವವಿದ್ಯಾಲಯ ಮತ್ತು ರಾಜೀವ್ ಗಾಂಧಿ ಯೂನಿವರ್ಸಿಟಿ ನಾಲೆಡ್ಜ್ ಸೆಂಟರ್‌ನಲ್ಲಿ ಸಂಗೀತ ಪ್ರಾಧ್ಯಾಪಕರು. ತಿರುಪತಿ ದೇವಸ್ಥಾನ, ಕಾಳಹಸ್ತಿ ದೇವಸ್ಥಾನ, ಯಾದಗಿರಿ ಲಕ್ಷ್ಮೀನರಸಿಂಹ ದೇವಾಲಯಗಳ "ಆಸ್ಥಾನ ವಿದ್ವಾನ್" ಗೌರವ. ಅಖಂಡ ಮೃದಂಗ ವಾದನಕ್ಕಾಗಿ ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್ ದಾಖಲೆ. ಹತ್ತು ಜನ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ. ರಾಷ್ಟ್ರಪತಿಗಳು, ಪ್ರಧಾನಿಗಳು ಮತ್ತು ಮುಖ್ಯಮಂತ್ರಿಗಳಿಂದ ಪುರಸ್ಕೃತರಾದ ವಿಶಿಷ್ಟ ಕಲಾವಿದರು. ಹಲವಾರು ವಿಶ್ವವಿದ್ಯಾಲಯಗಳಲ್ಲಿ ಸಂಗೀತವನ್ನು ಕುರಿತಂತೆ ಪ್ರಾತ್ಯಕ್ಷಿಕೆಗಳನ್ನು ನೀಡಿರುವರು. ವಿಚಾರಸಂಕಿರಣಗಳು ಮತ್ತು ಕಮ್ಮಟಗಳ ಆಯೋಜಕರು. ಸಂಗೀತಚಿಕಿತ್ಸೆಯಲ್ಲೂ ನಿಷ್ಣಾತರು.

**ವಿದ್ವಾನ್ ಜೆ.ಎಸ್. ರಾಮಾನುಜಂರವರು** ಸಂಗೀತಗಾರರ ಮನೆತನದಿಂದ ಬಂದವರು. ಮೃದಂಗ ವಾದನದಲ್ಲಿಯೂ ನಿಷ್ಣಾತರು. ಗಾನಕಲಾಭೂಷಣ ವಿದ್ವಾನ್ ಪಿ.ಜಿ.ಲಕ್ಷ್ಮೀನಾರಾಯಣ ರವರ ಶಿಷ್ಯರು. ದೇಶವಿದೇಶಗಳಲ್ಲಿ ಹಲವಾರು ಖ್ಯಾತ ಸಂಗೀತಗಾರರಿಗೆ ಘಟಂ ಸಹಕಾರ ನೀಡಿದ್ದಾರೆ. ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿರುವರು. ಸುಸ್ವರಾಲಯ ಸಂಗೀತ ಕಾಲೇಜು ಇತ್ತೀಚೆಗೆ ನೀಡಿರುವ "ಸ್ವರಲಯಶೃಂಗ" ಪುರಸ್ಕಾರವೂ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

# ಬೆಳದಿಂಗಳ ಸಂಗೀತ 258

## 31 ಆಗಸ್ಟ್ 2023



**ಗಾಯನ**

**ವಿದುಷಿ ಸ್ಫೂರ್ತಿ ರಾವ್**

**ವಯೊಲಿನ್**

**ವಿದ್ವಾನ್ ಆರ್. ರಾಹುಲ್**





**ಮೃದಂಗ**

**ವಿದ್ವಾನ್ ಕೆ.ವಿ. ಪ್ರಸಾದ್**

**ಘಟಂ**

**ವಿದ್ವಾನ್ ಶರತ್ ಕೌಶಿಕ್**



---

**ಫೋನ್: 0821–2548221, 2548223 * ಇಮೇಲ್: sutturmath@jssonline.org**